# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಮಿತಿ (ಅಂದಾಜುಗಳ ಸಮಿತಿ)

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ  ದಿನಾಂಕ : DATE : 01/08/2019

# 'ಅಧಿಕೃತವಾಗಿ ಸ್ಥಳ ಗುರುತಿಸಿದ ನಂತರವೇ ಕ್ರೀಡಾಂಗಣ ನಿರ್ಮಿಸಿ'

## ಅಂದಾಜುಗಳ ಸಮಿತಿ ಸರ್ಕಾರಕ್ಕೆ ಶಿಫಾರಸು

• **ಕನ್ನಡಪ್ರಭ ವಾರ್ತೆ** ವಿಧಾನಸಭೆ 1/8/19

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕ್ರೀಡಾಂಗಣ ನಿರ್ಮಿಸುವ ಮೊದಲು ಕ್ರೀಡಾಂಗಣಕ್ಕೆ ಅಧಿಕೃತವಾಗಿ ಸ್ಥಳವನ್ನು ಕಾಯ್ದಿರಿಸಿದ ನಂತರವೇ ಮುಂದುವರಿಯಬೇಕು ಎಂದು ವಿಧಾನಸಭೆಯ 2018-19ನೇ ಸಾಲಿನ ಅಂದಾಜುಗಳ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.



ಸಮಿತಿ ಅಧ್ಯಕ್ಷ ಕೆ.ಶ್ರೀನಿವಾಸಗೌಡ ಬುಧವಾರ ವಿಧಾನಸಭೆಯಲ್ಲಿ ಮಂಡಿಸಿದ ವರದಿಯಲ್ಲಿ ಕ್ರೀಡೆ ಹಾಗೂ ಯುವ ಸಬಲೀಕರಣ ಕುರಿತಂತೆ ಶಿಫಾರಸು ಮಾಡಿದೆ.

ಪ್ರಮುಖವಾಗಿ ಇಲಾಖೆಯ ಜಿಲ್ಲಾ ನಿರ್ದೇಶಕ ಸ್ಥಾನಕ್ಕೆ ಕ್ರೀಡೆಯಲ್ಲಿ ಆಸಕ್ತಿ ಇರುವವರನ್ನೇ ನೇಮಕ ಮಾಡಬೇಕು. ಬೆಳಗಾವಿಯಲ್ಲಿ ಕ್ರೀಡಾ ಅಕಾಡೆಮಿ ಹಾಗೂ ಬೆಳಗಾವಿ ದಕ್ಷಿಣದಲ್ಲಿ ಪುಣೆ ಮಾದರಿಯಂತೆ ಅಂತಾರಾಷ್ಟ್ರೀಯ ಮಟ್ಟದ ಒಳಾಂಗಣ-ಕ್ರೀಡಾಂಗಣವನ್ನು ಮೂಲಭೂತ ಸೌಕರ್ಯದೊಂದಿಗೆ ಕೇಂದ್ರದ ಸಹಯೋಗದೊಂದಿಗೆ ನಿರ್ಮಿಸಬೇಕು. ಇಲಾಖೆಯಿಂದ ನಿರ್ಮಿಸುವ ಈಜುಕೊಳಗಳನ್ನು ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿರಬೇಕು. ಅಧಿಕಾರಿಗಳಿಗೆ ಆರ್ಥಿಕ ಮಂಜೂರಾತಿ ಮಾಡಲು ಈಗಿರುವ 50 ಲಕ್ಷ ರು. ಮಿತಿಯನ್ನು ಒಂದು ಕೋಟಿ ರು. ಗಿಂತ ಹೆಚ್ಚಿಸಬೇಕೆಂದು ಶಿಫಾರಸು ಮಾಡಲಾಗಿದೆ.

ಕೆಳಹಂತದ ಕ್ರೀಡಾಪಟುಗಳಿಗೆ ಕೊಡುವ ಬಹುಮಾನದ ಮೊತ್ತವನ್ನು ಹೆಚ್ಚಿಸಬೇಕು. ನಗದು ಪುರಸ್ಕಾರಕ್ಕೆ ಅರ್ಹರಾದ ಕ್ರೀಡಾಪಟುಗಳಿಗೆ ಅನುದಾನ ಜಾಸ್ತಿ ಮಾಡಬೇಕು. ಕುಸ್ತಿ ತರಬೇತಿ ನೀಡಲು ಬೆಳಗಾವಿಯಲ್ಲಿ ಐದು ಎಕರೆ ಜಮೀನನ್ನು ಮಠಪತಿ ಎಂಬುವರ ಸಂಸ್ಥೆಗೆ ನೀಡಬೇಕೆಂದು ಸಮಿತಿ ಶಿಫಾರಸು ಮಾಡಿದೆ.

5